# ಅರಸಿನ

ಅರಸಿನ ಕೃಷಿಯ ವರಮಾನ ಕಡಿಮೆಯಾದುದರಿಂದ ಕೃಷಿಕರು ಇತರ ಪರ್ಯಾಯ ಲಾಭದಾಯಕ ಬೆಳೆಗೆ ಬದಲಾವಣೆ ಮಾಡಿರುವುದರಿಂದ ಹಿಂದಿನ ಕೆಲವು ವರ್ಷಗಳಿಂದ ಅರಸಿನ ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ. 2015–16ರಲ್ಲಿ ಅರಸಿನ ಉತ್ಪಾದನೆ 5–10 ಶೇಕಡಾ ಇಳಿಕೆಯಾಗಿ ಹಿಂದಿನ ವರ್ಷದಲ್ಲಿ 7.35 ಲಕ್ಷ ಟನ್‌ನಿಂದ 6.75 ಲಕ್ಷ ಟನ್‌ಗಳಿಗೆ ಇಳಿಕೆಯಾಗಬಹುದೆಂದು ಕೆಲವು ವ್ಯಾಪಾರಿ ಮೂಲಗಳ ಅನಿಸಿಕೆ. 2015–16ರ ಪ್ರಥಮ 5 ತಿಂಗಳುಗಳ ಅರಸಿನ ರಫ್ತು 38774 ಟನ್‌ಗಳಾಗಿದ್ದು ಈ ಅವಧಿ ಹಿಂದಿನ ವರ್ಷದಷ್ಟೇ ಇದೆಯೆಂದು ವಾಣಿಜ್ಯ ವಿಭಾಗದ ದತ್ತಾಂಶಗಳಿಂದ ತಿಳಿದು ಬಂದಿದೆಯೆನ್ನಲಾಗಿದೆ. ಹಿಂದಿನ ವರ್ಷ ಒಟ್ಟು ರಫ್ತು 90 ಸಾವಿರ ಟನ್‌ಗಳಾಗಿದ್ದು, ಈ ವರ್ಷ ಉತ್ಪಾದನೆಯ ಇಳಿಕೆಯ ನಿರೀಕ್ಷೆ ಹಾಗೂ ಹೆಚ್ಚಿನ ದೇಶೀ ಬೇಡಿಕೆಯಿಂದಾಗಿ, ಸ್ಪೈಸಸ್ ಬೋರ್ಡ್ 80000 ಟನ್‌ಗಳಷ್ಟು ಅರಸಿನ ರಫ್ತು ಮಾಡುವ ಗುರಿಯಿರಿಸಿಕೊಂಡಿದೆಯೆನ್ನಲಾಗಿದೆ.

ಬಿಗು ಪೂರೈಕೆ ಉತ್ತಮ ಬೇಡಿಕೆಗಳಿಂದ ಮುಂದಿನ ದಿನಗಳಲ್ಲಿ ತೇಜಿ ಟ್ರೆಂಡ್ ಮುಂದುವರಿಯಲಿದೆಯೆನ್ನಲಾಗಿದೆ. ಹಿಂದಿನ ಕೆಲವು ವರ್ಷಗಳಿಂದ ಕ್ಯಾರಿ ಓವರ್ ದಾಸ್ತಾನು ಇಳಿಕೆಯಾಗುತ್ತಿದೆ ಮತ್ತು ಉತ್ಪಾದನೆಯಲ್ಲಿ ಇಳಿಕೆಯ ನಿರೀಕ್ಷೆ ಹಾಗೂ ಪ್ರಬಲ ಆಂತರಿಕ ಬೇಡಿಕೆಯಿಂದ ಮುಂದಿನ ದಿನಗಳಲ್ಲಿ ದರಗಳು ಪ್ರಬಲವಾಗಿರುವ ನಿರೀಕ್ಷೆಯಿದೆ.

## ಉತ್ಪಾದನೆ ಇಳಿಕೆ ನಿರೀಕ್ಷೆಯಿಂದ ಅರಸಿನ ದರ ತೇಜಿ ಮುಂದುವರಿಕೆ

ಹಿಂದಿನ ಮೂರು ನಾಲ್ಕು ತಿಂಗಳುಗಳಿಂದ ಮುಂಗಾರು ಅವಧಿಯ ಮಳೆ ಕಡಿಮೆಯಾಗಿ ಅರಸಿನ ಬೆಳೆ ಉತ್ಪಾದನೆ ಇಳಿಕೆಯ ನಿರೀಕ್ಷೆಯಿಂದ ಹೆಚ್ಚಳವಾಗಿದ್ದು, ಹೆಚ್ಚಳದಲ್ಲೇ ಇರುವ ಸಂಭವವಿದೆಯೆನ್ನಲಾಗಿದೆ. ನೀರಿನ ಅಭಾವದ ಒತ್ತಡದಿಂದ ಪ್ರಮುಖ ಅರಸಿನ ಬೆಳೆಯುವ ರಾಜ್ಯಗಳಲ್ಲಿ ನಾಟಿ ಇಳಿಕೆಯಾಗಿರುವ ವರದಿಗಳಿದ್ದು ಫಸಲು ಇಳಿಕೆಯ ನಿರೀಕ್ಷೆಯಿದೆಯೆನ್ನಲಾಗಿದೆ. ಕಳೆದೊಂದು ತಿಂಗಳಿಂದ ಎನ್‌ಸಿಡಿಇ ಎಕ್ಸ್‌ನ ಫ್ಯೂಚರ್ ಟ್ರೇಡಿಂಗ್‌ನಲ್ಲಿ ಅರಸಿನ ದರ 15 ಶೇಕಡಾಕ್ಕಿಂತ ಅಧಿಕ ಹೆಚ್ಚಳವಾಗಿ ರೂ.7788 ರಿಂದ ರೂ.8954 ಕ್ಕೇರಿದೆ. ಉತ್ತಮ ಗುಣಮಟ್ಟದ ಅರಸಿನ ಅವಕ, ಹೆಚ್ಚಿನ ಬೇಡಿಕೆಯಿಂದ ದರ ಹೆಚ್ಚಳ ಕಂಡಿದೆಯೆನ್ನಲಾಗಿದೆ. ಜುಲಾಯ್, ಅಗಸ್ಟ್ ತಿಂಗಳುಗಳಲ್ಲಿ ಅರಸಿನ ಬೆಳೆಯುವ ಮಹಾರಾಷ್ಟ್ರ ಮತ್ತು ದಕ್ಷಿಣ ಭಾತರದ ರಾಜ್ಯಗಳಲ್ಲಿ ಮಳೆ ಬೀಳುವಿಕೆ ಕಡಿಮೆಯಾಗುವ ಮತ್ತೆ ಸೆಪ್ಟೆಂಬರ್‌ನಲ್ಲಿ ಮಳೆ ಉತ್ತಮ ಗೊಂಡಾಗ ದರ 6 ಶೇಕಡಾ ಇಳಿಕೆಯಾಗಿ ರೂ.7850 ಆಗಿತ್ತು. ಅಲ್ಲಿಂದ ಮತ್ತೇ 8 ಶೇಕಡಾ ದರ ಹೆಚ್ಚಳವಾಗಿದೆ. ತೆಲಂಗಾಣ, ಕರ್ನಾಟಕ ಮತ್ತು ಕರ್ನಾಟಕದಲ್ಲಿ ಜುಲಾಯ್ ಆಗಸ್ಟ್ ತಿಂಗಳುಗಳಲ್ಲಿ ಮಳೆ ಕಡಿಮೆಯಾದುದರಿಂದ ಮಣ್ಣಿನ ತೇವಾಂಶ ಇಳಿಕೆಯಾಗಿ ಮತ್ತು ನೀರಿನ ಅಭಾವದ ಒತ್ತಡದಿಂದ ಅರಸಿನ ನಾಟಿ ಪ್ರಮಾಣ ಇಳಿಕೆಯಾಗಿದೆಯೆನ್ನಲಾಗಿದೆ. ತೆಲಂಗಾಣದಲ್ಲಿ ನಾಟಿ ಸಾಮಾನ್ಯಕ್ಕಿಂತ 17 ಶೇಕಡಾ ಇಳಿಕೆಯಾಗಿ 40823 ಹೆಕ್ಟೇರ್‌ಗಳಲ್ಲಾಗಿದೆಯೆನ್ನಲಾಗಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ನಾಟಿ ಪ್ರಮಾಣ 25ರಿಂದ 30 ಶೇಕಡಾ ಇಳಿಕೆಯಾಗಿ ಕ್ರಮವಾಗಿ 7000 ಮತ್ತು 12000 ಹೆಕ್ಟೇರ್ ಪ್ರದೇಶಗಳಲ್ಲಿ ನಾಟಿಯಾಗಿದೆಯೆನ್ನಲಾಗಿದೆ. ಉತ್ತಮ ಮಳೆಬೀಳುವಿಕೆ ಮತ್ತು ನೀರಾವರಿ ಸೌಲಭ್ಯಗಳಿಂದಾಗಿ ತಮಿಳುನಾಡಿನಲ್ಲಿ ಅರಸಿನ ನಾಟಿ 10–12 ಶೇಕಡಾ ಹೆಚ್ಚಳವಾಗಿ 5000 ಹೆಕ್ಟೇರ್‌ಗಳಲ್ಲಿ ಬೆಳೆ ಬೆಳೆಯಲಾಗಿದೆಯೆನ್ನಲಾಗಿದೆ.